<u>ಇಂದು ದಿಃ **12-07-2024** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಕೆ ವಕೀಲರಿಂದ 19 ಮತ್ತು 20 ನೇ ಪ್ರತಿವಾದಿಗಳ ಪರ:**

ಕಳೆದ ಬಾರಿ ನನ್ನ ಆದ ಸಾಕ್ಷಿ ವಿಚಾರಣೆ ಮತ್ತು ನಂತರದ ಬೆಳೆವಣಿಗೆಗಳು ನನ್ನ ಗಮನದಲ್ಲಿ ಇವೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಮತ್ತು ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆಯ ಮನೆತನಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಯವರು ನೀಡುವ ವಂಶವೃಕ್ಷವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ಅದಕ್ಕೆಲ್ಲಾ ಅರ್ಜಿ, ಪ್ರಮಾಣ ಪತ್ರ ನಾನು ಕೊಟ್ಟಿರುತ್ತೇನೆ. ನನ್ನನ್ನು ಹೊರತುಪಡಿಸಿ ಬೇರೆ ಯಾರೂ ಅರ್ಜಿ ನೀಡಿಲ್ಲ. ವಂಶವೃಕ್ಷ ನನ್ನ ಬಳಿ ಇರಬಹುದು ನನಗೆ ನೆನಪಿಲ್ಲ. ಈ ವಂಶವೃಕ್ಷವನ್ನು ನಾನು ಹಾಜರುಪಡಿಸಿಲ್ಲ ಎಂದರೆ ನೆನಪಿಲ್ಲ. 4 ನೇ ವಾದಿಗೆ ಈ ನಾನು ಹೇಳುವ ದಾಖಲೆಗೆ ಯಾವುದೇ ಸಂಬಂಧ ಇಲ್ಲ ಎಂದು, ಕೇಳಲು ಸಾಕ್ಷಿ ನಾನು ವಂಶವೃಕ್ಷ ತೆಗೆದುಕೊಂಡಿದ್ದು ಎಂದು ಹೇಳುತ್ತಾರೆ. ಪ್ರತಿವಾದಿ 19 ಮತ್ತು 20 ಇವರನ್ನು ಈ ದಾವೆಯಲ್ಲಿ ಪಕ್ಷಗಾರ ಎಂದು ಮಾಡಿದ್ದೇವೆ ಎಂದರೆ ಸರಿ. ಪ್ರತಿವಾದಿ 19 ಮತ್ತು 20 ಇವರು ಖರೀದಿ ಮಾಡಿದ ನಿ.ಪಿ-4 ರಿಂದ 9 ದಾಖಲೆಗಳ ನಕಲು ಪ್ರತಿಗಳನ್ನು ಯಾರು ಪಡೆದುಕೊಂಡರು ಎಂದು ಹೇಳಲು ಆಗುವುದಿಲ್ಲ. ಈ ದಾಖಲೆಗಳಲ್ಲಿ ಏನು ಬರೆದಿದ್ದಾರೆ ಎಂದು ಮಾಹಿತಿ ನನಗೆ ಇದೆ. ಒಟ್ಟು ಎಷ್ಟು ದಾಖಲೆಗಳು ಪ್ರತಿವಾದಿ 19 ಮತ್ತು 20 ಇವರ ಹೆಸರಿಗೆ ಆಗಿವೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಗಳಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. 19 ಮತ್ತು 20 ನೇ ಪ್ರತಿವಾದಿಗೆ ನನ್ನ ಅಣ್ಣ ತಮ್ಮಂದಿರು ಕ್ರಯ ಪತ್ರ ಮಾಡಿಕೊಟ್ಟರು. ಪರುಶುರಾಮಪ್ಪ, ಕೃಷ್ಣಪ್ಪ, ಬಾಬಪ್ಪ , ಅಣ್ಣಪ್ಪ, ರವಿ, ಬಾಬಪ್ಪನ ಹೆಂಡತಿ ನಂದಾಬಾಯಿ, ಮಕ್ಕಳಾದ ಹುಲಿಗೆಪ್ಪ, ಜಯಶ್ರೀ, ಸುನೀಲ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆ. ಯಾವ ರೀತಿ ಬರೆದುಕೊಟ್ಟರು ಎಂದು ಗೊತ್ತಿಲ್ಲ. ಸಾಕ್ಷಿ ಖರೀದಿ ಆದ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಯಾರು ಯಾರಿಗೆ ಖರೀದಿ ಪತ್ರ ಬರೆದುಕೊಟ್ಟರು ಎಂದು ಗೊತ್ತಿಲ್ಲ. ಸೀತಾ

ಬಾಯಿ ಮತ್ತು ಇತರರು ಯಾರಿಗೆ ಖರೀದಿ ಪತ್ರ ಮಾಡಿಕೊಟ್ಟರು ಎಂದು ನೆನಪಿಲ್ಲ. ಸೀತಾಬಾಯಿ ನನ್ನ ತಾಯಿ ಆಕೆ ತೀರಿಕೊಂಡಿದ್ದಾಳೆ. ನನ್ನ ತಾಯಿ ತೀರಿಕೊಂಡಿದ್ದಾಳೆ ಎಂದು ಈ ದಾವೆಯಲ್ಲಿ ತಿಳಿಸಿದ್ದೇವೆ. ನ್ಯಾಯಾಲಯಕ್ಕೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಹೆಚ್.ಶಿವಪ್ಪ ತಂದೆ ಹೆಚ್.ತಿಪ್ಪಣ್ಣ ಇವರು ಗೊತ್ತು. ಅವರು ಹರಿಹರದ ಎಂ.ಎಲ್.ಎ ಇದ್ದರು ಎಂದರೆ ಸರಿ. ಎರಡು ಸಲ ಸಚಿವರು ಇದ್ದರು ಎಂದರೆ ಸರಿ. ಸದರಿ ಶಿವಪ್ಪ ಇವರಿಗೆ ನನ್ನ ತಾಯಿ ಮತ್ತು ಸಹೋದರರು ಮತ್ತು ಅತ್ತಿಗೆ ಅವರವರ ಆಸ್ತಿಗಳಿಗೆ ಸಂಬಂಧಿಸಿದಂತೆ ನೊಂದಾಯಿತ ಅಧಿಕಾರ ಪತ್ರ ಬರೆದುಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಪಹಣಿ ತೆಗಿಸಿದಾಗ ಗೊತ್ತಾಗಿರುತ್ತದೆ. ಈ ದಾವೆ ಸಲ್ಲಿಸುವ ಮೊದಲು ಪಹಣಿಗಳನ್ನು ತೆಗೆಸಿರುತ್ತೇನೆ. ನನ್ನ ತಾಯಿ ಮತ್ತು ಸಹೋದರರು ಮತ್ತು ಅತ್ತಿಗೆ ಅಧಿಕಾರ ಪತ್ರ ಬರೆದುಕೊಟ್ಟ ಬಗ್ಗೆ ನಾನು ಹೇಳಿಲ್ಲ. ನಾನು ಹಾಜರುಪಡಿಸಿದ ಕ್ರಯಪತ್ರಗಳ ಬಗ್ಗೆ ಮಾಹಿತಿ ಇದೆ. ಈ ಕ್ರಯಪತ್ರಗಳ ಬಗ್ಗೆ ಮಾಹಿತಿ ನನಗೆ ಈ ದಾವೆ ಮಾಡಿದ ನಂತರ ಗೊತ್ತಾಯಿತು. ಈ ಕ್ರಯಪತ್ರಗಳಲ್ಲಿ ನನ್ನ ತಾಯಿ, ಅತ್ತಿಗೆ ಮತ್ತು ಸಹೋದರರು ಜಿ.ಪಿ.ಎ ಬರೆದುಕೊಟ್ಟ ಬಗ್ಗೆ ಗೊತ್ತಾಯಿತು ಎಂದರೆ ಸರಿ. ಸಾಕ್ಷಿ ಗೊತ್ತಾದ ನಂತರ ಈ ದಾವೆ ಮಾಡಿದ್ದು ಎಂದು ಹೇಳುತ್ತಾರೆ. ಗೊತ್ತಾದ ನಂತರ ಸದರಿ ಜಿ.ಪಿ.ಎ ಗಳ ನಕಲು ಪ್ರತಿಗಳನ್ನು ತೆಗೆಸುವ ಪ್ರಯತ್ನ ಮಾಡಿಲ್ಲ. ಸದರಿ ನಕಲುಗಳನ್ನು ತೆಗೆಸಲು ನನಗೆ ತೊಂದರೆ ಇರಲಿಲ್ಲ.

**ಮುಂದಿನ ಪಾಟೀ ಸವಾಲಿಗೆ 19 ಮತ್ತು 20 ನೇ ಪ್ರತಿವಾದಿಗಳ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.